### ಬಿಹಾರದಲ್ಲಿ ಎಪಿಎಂಸಿಗಳನ್ನು ತೆಗೆದ ಮೇಲೆ ರೈತರಿಗೆ ಸ್ಪರ್ಧಾತ್ಮಕ ಬೆಲೆಗಳು ಸಿಗಲಾಗಿ ಕೃಷಿ ಅಭಿವೃದ್ಧಿ ದರ ಹೆಚ್ಚಾಗಿದೆ

# ಕೃಷಿ ಕಾಯ್ದೆಗಳ ರದ್ದತಿ ಅಗತ್ಯವಿಲ್ಲ, ಏಕೆ?




ಡಾ.ಎಂ.ಜಿ. ಚಂದ್ರಕಾಂತ್

ನಿವೃತ್ತ ನಿರ್ದೇಶಕ, ಐಎಸ್ಇಸಿ ಬೆಂಗಳೂರು


2005ರಲ್ಲಿ ಬಿಹಾರವು ಎಪಿಎಂಸಿ ಕಾಯ್ದೆಯನ್ನು ತೆಗೆಯುವ ಮೂಲಕ ಆರ್ಥಿಕ ಸುಧಾರಣೆಗಳನ್ನು ತಂದಿತು. ಇದರಿಂದ ಬಿಹಾರವು ವಿಶೇಷವಾದ ಕೃಷಿ ಮತ್ತು ಒಟ್ಟಾರೆ ಅಭಿವೃದ್ಧಿಯ ಬೆಳವಣಿಗೆ ಕಂಡಿದೆ. 2005ರಿಂದೀಚೆಗೆ ಆರ್ಥಿಕ ಅಭಿವೃದ್ಧಿ ದರ 5.3% ನಿಂದ 11.7%ಗೆ ಏರಿಕೆಯಾಗಿದೆ.

ಸರ್ಕಾರವು ಸೆಪ್ಟೆಂಬರ್-ಅಕ್ಟೋಬರ್ 2020ರಲ್ಲಿ ಜಾರಿಗೆ ತಂದ 3 ಹೊಸ ಕೃಷಿ ಕಾನೂನುಗಳನ್ನು ಈ ಕೆಳಕಂಡ 10 ಕಾರಣಗಳಿಗಾಗಿ ರದ್ದುಗೊಳಿಸಬಾರದು.

## 1 ಎಪಿಎಂಸಿಯಲ್ಲಿ ರೈತರ ಶೋಷಣೆ

ಭಾರತದಲ್ಲಿ 55 ವರ್ಷಗಳ ಎಪಿಎಂಸಿಗಳ ಅನುಭವದಲ್ಲಿ ಹೇಳುವುದಾದರೆ, ನಮ್ಮ ರೈತರಿಗೆ ಈಗಲೂ ಗ್ರಾಹಕರು ಕೊಡುವ ಬೆಲೆಯ ಶೇ.50ರಷ್ಟೂ ಸಿಗದಿರುವುದು ಗಮನಕ್ಕೆ ಬಂದಿದೆ. ಆರ್‌ಬಿಐ 2019ರಲ್ಲಿ 16 ರಾಜ್ಯಗಳಲ್ಲಿ, 16 ಆಹಾರ ಬೆಳೆಗಳ, 9400 ರೈತರು, ವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳನ್ನು ಒಳಗೊಂಡಂತೆ ನಡೆಸಿದ ಅಧ್ಯಯನದಲ್ಲಿ ಸೂಚಿಸಿದಂತೆ ರೈತರು ಇನ್ನೂ ಗ್ರಾಹಕ ಕೊಡುವ ರುಪಾಯಿಯ ಅತಿ ಕಡಿಮೆ ಪಾಲನ್ನು ಪಡೆಯುತ್ತಿದ್ದಾರೆ ಎಂದು ತಿಳಿದು ಬಂದಿದೆ. ಉದಾಹರಣೆಗೆ ಗ್ರಾಹಕ ಕೊಡುವ ಒಂದು ರುಪಾಯಿಯಲ್ಲಿ ರೈತರ ಪಾಲು ಆಲೂಗಡ್ಡೆಯಲ್ಲಿ ಶೇ.28, ಈರುಳ್ಳಿಯಲ್ಲಿ ಶೇ.33, ಅಕ್ಕಿಯಲ್ಲಿ ಶೇ.49ರಷ್ಟು ಮಾತ್ರ ಸಿಗುತ್ತಿರುವುದು ವಿಷಾದನೀಯ. ಮುಖ್ಯವಾಗಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಬೆಳೆಯಾದ ಅಕ್ಕಿಯಲ್ಲಿ ಸಹ ರೈತರಿಗೆ ಎಂಎಸ್‌ಪಿ ಬೆಲೆಗಿಂತ ಸುಮಾರು ಮುನ್ನೂರು ನಾನೂರು ರು. ಕಡಿಮೆ ಸಿಕ್ಕಿರುವ ಅಂಶ ಗಮನಕ್ಕೆ ಬಂದಿರುವುದು ಸರ್ವ ವೇದ್ಯ.

ಎಂಎಸ್‌ಪಿ ಒದಗಿಸುವುದರಿಂದ ಮಾತ್ರವೇ ರೈತರಿಗೆ ಖಚಿತವಾಗಿ ಎಂಎಸ್‌ಪಿ ಬೆಲೆ ಸಿಕ್ಕುವುದೆಂಬುದು ಮಿಥ್ಯ. ಏಕೆಂದರೆ ಬೇಡಿಕೆಗಿಂತ ಪೂರೈಕೆ ಹೆಚ್ಚಿರುವುದರಿಂದ, ರೈತರಿಗೆ ಸಿಗುವ ಬೆಲೆ ಎಂಎಸ್‌ಪಿಗಿಂತ ಕಡಿಮೆಯೇ ಇರುತ್ತದೆ. ಹಾಗೂ ರೈತರಿಗೆ ಗ್ರಾಹಕರ ರುಪಾಯಿಯ ಹೆಚ್ಚಿನ ಪಾಲು ಹೆಚ್ಚಿನ ಮಧ್ಯವರ್ತಿಗಳಿಂದಾಗಿ ಸಿಗುವುದಿಲ್ಲ. ರಾಷ್ಟ್ರೀಯ ಆಹಾರ ಭದ್ರತಾ ಕಾರ್ಯಾಚರಣೆಯಂತಹ ಯೋಜನೆಗಳಿಂದ ಬೇಡಿಕೆಯು ಪ್ರಭಾವಿತವಾಗಿರುತ್ತದೆ. ಹೀಗಾಗಿ ಭತ್ತವನ್ನು ಅತಿ ಕಡಿಮೆ ಬೆಲೆಗಾಗಲೀ ಉಚಿತವಾಗಲೀ ಕೊಟ್ಟಾಗ, ರಾಗಿ, ಜೋಳ, ಸಜ್ಜೆಯಂತ ಧಾನ್ಯಗಳ ಬೇಡಿಕೆ ಕಡಿಮೆಯಾಗಿ, ಅವುಗಳನ್ನು ಬೆಳೆಯುವ ಖುಷ್ಕಿ ಜಮೀನಿನ ರೈತರಿಗೂ ಎಂಎಸ್‌ಪಿ ದರ ಸಿಗದೇ ನಷ್ಟವನ್ನು ಅನುಭವಿಸುವ ಪರಿ ಕಾಣುತ್ತೇವೆ. ಆದ್ದರಿಂದ ಕೃಷಿ ಮಾರುಕಟ್ಟೆಗಳನ್ನು ವಿಸ್ತರಿಸುವ ಮೂಲಕ ಸ್ಪರ್ಧೆಯನ್ನು ಹೆಚ್ಚು ಮಾಡುವುದರ ಮೂಲಕ ಈ ಮೂರು ಹೊಸ ಕೃಷಿ ಕಾನೂನುಗಳು ರೈತರಿಗೆ ಪ್ರಯೋಜನವನ್ನು ನೀಡುತ್ತವೆ.

## 2 ಎಪಿಎಂಸಿಗಳಲ್ಲಿನ ಅಸಮರ್ಥತೆ

ದೇಶದಲ್ಲಿ ಎಪಿಎಂಸಿ ಕಾಯ್ದೆ ಬಂದ 55 ವರ್ಷಗಳ ನಂತರವೂ ಎಪಿಎಂಸಿಗಳಲ್ಲಿ ಮಂಡಿ ವರ್ತಕರ, ಮಧ್ಯವರ್ತಿಗಳ ಅಸಮರ್ಥತೆಯಿಂದಾಗಿ ರೈತರಿಗೆ ಅವರು ತಂದ ಬೆಳೆಗಳ ಬೆಲೆ/ಪ್ರಮಾಣ / ಗುಣಮಟ್ಟವನ್ನು ನಮೂದಿಸದೆ, ಬೆಲೆ ರಚನೆ ಮತ್ತು ಪಾವತಿಯಲ್ಲಿ ಯಾವುದೇ ಪಾರದರ್ಶಕತೆ ಇಲ್ಲದೆ, ಅನೌಪಚಾರಿಕ ಸೂಚನೆಯೊಂದಿಗೆ ಇಂದಿಗೂ ಬಿಳಿ ಚೀಟಿ ಕೊಡುತ್ತಿರುವುದು ಸರ್ವ ವೇದ್ಯವಾಗಿದೆ. ಹೀಗಾಗಿ ರೈತರಿಗೆ ತಾವು ತಂದ ಬೆಳೆಗೆ ಯಾವ ಬೆಲೆ ಸಿಗುತ್ತದೆ ಎಂಬುದೇ ಯಕ್ಷಪ್ರಶ್ನೆಯಾಗಿ ಕಾಡುತ್ತಿದೆ.

## 3 ಏಕಸ್ವಾಮ್ಯದ ಮಾರುಕಟ್ಟೆಗಳಲ್ಲಿಲ್ಲ ಸ್ಪರ್ಧೆ

ಮಾವಿನ ಬೆಲೆಯಲ್ಲಿ ಭಾರತ ಎತ್ತಿದ ಕೈ ಆದರೂ, ಮಾವು ಬೆಳೆದ ರೈತರಿಗೆ ಒಳ್ಳೆಯ ಆದಾಯ ಗಗನಕುಸುಮವಾಗಿದೆ. ಏಕೆಂದರೆ ದೇಶದಲ್ಲಿಯೇ ಮಾವಿನ ಬೆಲೆ ನಿರ್ಧಾರ ಮಾಡುವವರು ಒಬ್ಬರೋ ಇಬ್ಬರೋ. ಈಗಲೂ ಶ್ರೀನಿವಾಸಪುರದ ಅತಿ ದೊಡ್ಡ ಮಾವಿನ ಮಾರುಕಟ್ಟೆಯಲ್ಲಿ ಮಂಡಿ ವರ್ತಕರು ಶುಕ್ರವಾರದಂದೇ ಮಾರುಕಟ್ಟೆಯ ಹೊರಗಡೆಯೇ ಯಾವ ರೀತಿ ಬೆಲೆ ನಿರ್ಧಾರ ಮಾಡುತ್ತಾರೆಂಬುದು ಕಗ್ಗಂಟಾಗಿದೆ. ಹಾಗೂ ಮಾವಿನ ಮಾರುಕಟ್ಟೆಯಲ್ಲಿ ಹೊರಗಿನಿಂದ ಯಾರೂ ಸ್ಪರ್ಧಿಸುವ ಹಾಗಿಲ್ಲದಿರುವ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ ಈ ನೂತನ ಕಾಯ್ದೆಗಳಿಂದ ಹೊರಗಡೆ ಸ್ಪರ್ಧೆಯಿಂದ ರೈತರಿಗೆ ಒಳ್ಳೆಯ ಬೆಲೆ ಸಿಕ್ಕುವ ಸಾಧ್ಯತೆ ಹೆಚ್ಚಿದೆ.



## 4 ವ್ಯಾಪಕ ಮಾರುಕಟ್ಟೆಯಿಂದ ಪ್ರಯೋಜನ

ಹಸಿರು ಕ್ರಾಂತಿಯ ತಂತ್ರಜ್ಞಾನಗಳಿಂದಾಗಿ, ರೈತರಿಂದ ಮಾರುಕಟ್ಟೆ ಪೂರೈಕೆ ಹೆಚ್ಚಾಗಿದೆ. ಇದರಿಂದಾಗಿ ಸರ್ಕಾರ ಕನಿಷ್ಠ ಬೆಂಬಲ ಎಷ್ಟೇ ಕೊಟ್ಟರೂ, ಅಂದರೆ ಡಾ.ಸ್ವಾಮಿನಾಥನ್ ಅವರ ವರದಿಯ ಪ್ರಕಾರ ಬೆಳೆ ಖರ್ಚಿಗೆ ಶೇ.50ರಷ್ಟು ಹೆಚ್ಚು, ಅಥವಾ 100ರಷ್ಟು ಹೆಚ್ಚಾಗಿ ಕೊಟ್ಟರೂ, ಪೂರೈಕೆ ಬೇಡಿಕೆಗಿಂತ ಹೆಚ್ಚಾಗಿರುವುದರಿಂದ ಮಾರುಕಟ್ಟೆ ಬೆಲೆ ಬಿದ್ದು ಹೋಗುತ್ತದೆ. ಇದರಿಂದಾಗಿ ರೈತರು ಏನು ತಿಳಿಯಬೇಕೆಂದರೆ, ಆಹಾರ ಧಾನ್ಯಗಳು ಎಷ್ಟು ಬೆಳೆಯಬೇಕೋ ಅಷ್ಟೇ ಬೆಳೆದುಕೊಂಡು ಮಿಕ್ಕ ಜಮೀನಿನಲ್ಲಿ ವಾಣಿಜ್ಯ ಬೆಳೆಗಳು, ಪಶು ಸಂಗೋಪನೆ, ಕುಕ್ಕುಟ ಕೃಷಿ, ತೋಟಗಾರಿಕೆ ಇತ್ಯಾದಿ ವೈವಿಧ್ಯಮಯ ಬೆಳೆಗಳನ್ನು ಬೆಳೆದರೆ ಮಾತ್ರ ರೈತರ ಆದಾಯ ದ್ವಿಗುಣವಾಗಲು ಸಾಧ್ಯ. ಆದರೆ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಎಪಿಎಂಸಿಗಳ ಹೊರಗೆ ಖರೀದಿಸಲು/ ಮಾರಾಟ ಮಾಡಲು ಅನುಮತಿ ಕೊಟ್ಟಿರುವುದರಿಂದ ಹೊಸ ಪೂರೈಕೆ/ ಮೌಲ್ಯ ಸರಪಳಿಗಳಿಂದಾಗಿ ರೈತರಿಗೆ ಪ್ರಯೋಜನವಾಗುತ್ತದೆ.

## 5 ರೈತರ ಸ್ವಾತಂತ್ರ್ಯದ ಉಲ್ಲಂಘನೆಯೇ?

ರೈತರು ತಮ್ಮ ಉತ್ಪನ್ನಗಳನ್ನು ಯಾರಿಗೆ, ಎಲ್ಲಿ, ಯಾವಾಗ, ಯಾವುದೇ ಪ್ರಮಾಣದಲ್ಲಿ ಮಾರಾಟ ಮಾಡುವ ಹಕ್ಕು ಯಾರೂ ಉಲ್ಲಂಘಿಸಲಾಗುವುದಿಲ್ಲ. ಈ ನಿಟ್ಟಿನಲ್ಲಿ ಹಿಂದೆ ಎಪಿಎಂಸಿ ಯಾರ್ಡ್ ಗಳಲ್ಲಿ ಮಾತ್ರ ಎಪಿಎಂಸಿ ಮಂಡಿ ವರ್ತಕರಿಗೆ ಮಾತ್ರ ಮಾರಬೇಕಾಗಿದ್ದು, ಇದರಿಂದ ರೈತರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗಿತ್ತು. ಆದರೆ ಹೊಸ ಕಾಯ್ದೆಯಲ್ಲಿ ಎಪಿಎಂಸಿಯ ಹೊರಗಡೆ ಕೂಡ ಕೊಂಡುಕೊಳ್ಳುವುದಕ್ಕೆ ಅನುಮತಿ ನೀಡಿರುವುದರಿಂದ, ರೈತರು ತಮ್ಮ ಪದಾರ್ಥಕ್ಕೆ ಎಲ್ಲಿ ಹೆಚ್ಚಿನ ಬೆಲೆ ಸಿಗುವುದೋ ಅಲ್ಲಿ ಮಾರಬಹುದಾಗಿದ್ದು, ರೈತರ ಸ್ವಾತಂತ್ರ್ಯವನ್ನು ಗೌರವಿಸಲಾಗಿದೆ. ಹಾಗೂ ಎಪಿಎಂಸಿಗಳು ಮತ್ತು ಫಾರ್ಮ್ ಗೇಟ್ ಬೆಲೆಗಳ ನಡುವಿನ ಬೆಲೆ ಪ್ರಸರಣದ ಸ್ಥಿತಿಸ್ಥಾಪಕತ್ವವು ಹೆಚ್ಚಾಗಿದ್ದು, ಎಪಿಎಂಸಿಯಲ್ಲಿ ಯಾವ ಬೆಲೆ ಸಿಗುತ್ತದೋ ಅದೇ ಬೆಲೆ ಹೊರಗಡೆಯೂ ಸಿಗುವ ಮಾಹಿತಿ ರೈತರಿಗೆ ತಿಳಿದು, ಅದಕ್ಕಿಂತ ಹೆಚ್ಚಿನ ಬೆಲೆಗೆ ಮಾರಬಹುದಾಗಿದೆ. ಹಾಗೂ ಎಪಿಎಂಸಿಯಲ್ಲಿನ ಶೋಷಣೆಗಳಿಂದ ದೂರವಿರಬಹುದಾಗಿದೆ.

## 6 ರಾಜ್ಯ ಹಕ್ಕು ಉಲ್ಲಂಘನೆ ಆಗಿಲ್ಲ

ಸಂವಿಧಾನದಲ್ಲಿ ಕೃಷಿ ಸರಕುಗಳ ವ್ಯಾಪಾರವನ್ನು ನಿಯಂತ್ರಿಸಲು ಎಂಟ್ರಿ 26 ರಾಜ್ಯಗಳಿಗೆ ಅನುವು ಮಾಡಿಕೊಡುತ್ತದೆ. ಆದರೆ ಈ ಹೆಚ್ಚಿನ ಧಾನ್ಯ ಸಂಪತ್ತನ್ನು ಅಂತಾರಾಜ್ಯ ಹಾಗೂ ರಫ್ತು ಮಾಡಲು ಅನುಮತಿ ಕೇಂದ್ರ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಎಂಟ್ರಿ 33ರಲ್ಲಿ ಅಂತಾರಾಜ್ಯ, ಅಂತಾರಾಷ್ಟ್ರೀಯ ಸಗಟು ವ್ಯಾಪಾರಗಳು ಕೇಂದ್ರದ ವ್ಯಾಪ್ತಿಗೆ ಒಳಪಟ್ಟಿರುವದರಿಂದ ಈ ಹೊಸ ಕಾಯ್ದೆಗಳನ್ನು ತರಲಾಗಿದೆ. ಅಲ್ಲದೆ, ಸಂವಿಧಾನದ ಸೆಕ್ಷನ್ 249ರಲ್ಲಿ ರಾಷ್ಟ್ರದ ಹಿತದೃಷ್ಟಿಯಿಂದ ರಾಜ್ಯಗಳಿಗೆ ಕಾನೂನು ರೂಪಿಸಬಹುದಾಗಿದೆ. ಇಲ್ಲಿ ರಾಷ್ಟ್ರದಲ್ಲೇ ರೈತರನ್ನು ಮಧ್ಯವರ್ತಿಗಳ ಶೋಷಣೆಯಿಂದ ರಕ್ಷಿಸುವ ರಾಷ್ಟ್ರೀಯ ಹಿತದೃಷ್ಟಿಯೇ ಪ್ರಮುಖವಾಗಿದೆ.

## 7 ಬಹು ಮಾರುಕಟ್ಟೆ ಮತ್ತು ಸ್ಪರ್ಧೆ

ಹೊಸ ಕಾಯ್ದೆ ಎಪಿಎಂಸಿ ಮಂಡಿಯ ಹೊರಗಡೆ ಕೂಡ ಖರೀದಿದಾರರಿಗೆ ಅವಕಾಶ ನೀಡುವುದು ಸ್ಪರ್ಧೆಯನ್ನು ಉತ್ತೇಜಿಸುತ್ತದೆ ಮತ್ತು ಶೋಷಣೆಯನ್ನು ತಡೆಯುತ್ತದೆ. ಪ್ರಸ್ತುತ, ಗ್ರಾಹಕರು ಹೆಚ್ಚಿನ ಬೆಲೆ ನೀಡುತ್ತಿದ್ದು, ಅದು ರೈತರನ್ನು ತಲುಪದೇ ಮಧ್ಯವರ್ತಿಗಳ ಬಾಯಿಗೇ ಹೋಗುತ್ತಿದೆ. ಹೀಗಾಗಿ, ಹೊಸ ಕಾನೂನುಗಳು ಮಾರುಕಟ್ಟೆಗಳನ್ನು ಸರಿಪಡಿಸುವ ಗುರಿ ಹೊಂದಿವೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ 2014ರಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆ ನಿರ್ಮಿಸಿ, ಇದರಿಂದ ಆಹಾರ ಧಾನ್ಯಗಳ ಬೆಲೆ ಶೇ.38ರಷ್ಟು ಹೆಚ್ಚಾದ ಅನುಭವದಿಂದ, ಈ ವ್ಯವಧಾನವನ್ನು ದೇಶಾಂತರ್ಗತ ಒದಗಿಸುವ ಪ್ರಯತ್ನವೇ ಈ ಕಾಯ್ದೆಗಳ ಉದ್ದೇಶ. ಆದ್ದರಿಂದ ಈಗ ಸಾಕಷ್ಟು ಮಾರುಕಟ್ಟೆ ಸ್ಪರ್ಧೆಯ ಕೊರತೆಯಿಂದಾಗಿ ಪ್ರಸ್ತುತ ಮಾರುಕಟ್ಟೆ ಬೆಲೆಗಳು 38ರಷ್ಟು ಕಡಿಮೆಯಾಗಿ ರೈತರಿಗೆ ಅನ್ಯಾಯವಾಗುತ್ತಿತ್ತು. ಹಾಗೂ ಹೊರಗಿನ ಸ್ಪರ್ಧಾತ್ಮಕ ಬೆಲೆಗಳನ್ನು ನೀಡಲು ಎಪಿಎಂಸಿಗೆ ಕೂಡ ಸಂಕೇತಗಳನ್ನು ಕೊಡುವ ಹಾಗೂ ಎಪಿಎಂಸಿಗಳೂ ಕೂಡ ಸ್ಪರ್ಧಾತ್ಮಕವಾಗಿ ನಿರ್ಧರಿಸಿದ ಬೆಲೆಗಳನ್ನು ಹೊರಗಿನ ಮಾರುಕಟ್ಟೆಗಳಿಗೆ ಸಂಕೇತವಾಗಿ ಕೊಡಬಹುದಾಗಿದೆ.

## 8 ಬಿಹಾರವೇ ಉದಾಹರಣೆ

2005ರಲ್ಲಿ ಬಿಹಾರವು ಎಪಿಎಂಸಿ ಕಾಯ್ದೆಯನ್ನು ತೆಗೆಯುವ ಮೂಲಕ ಆರ್ಥಿಕ ಸುಧಾರಣೆಗಳನ್ನು ತಂದಿತು. ಇದರಿಂದ ಬಿಹಾರವು ವಿಶೇಷವಾದ ಕೃಷಿ ಮತ್ತು ಒಟ್ಟಾರೆ ಅಭಿವೃದ್ಧಿಯ ಬೆಳವಣಿಗೆ ಕಂಡಿದೆ. ಉದಾಹರಣೆಗೆ 2005ಕ್ಕಿಂತ ಮೊದಲು, ಬಿಹಾರದಲ್ಲಿನ ಆರ್ಥಿಕ ಬೆಳವಣಿಗೆಯ ದರ ಶೇ.5.3 ರಷ್ಟಿದ್ದರೆ, ಭಾರತದ ಆರ್ಥಿಕ ಬೆಳವಣಿಗೆಯ ದರ 6.8% ರಷ್ಟಿತ್ತು. ಆದರೆ, 2005ರ ನಂತರ, ಬಿಹಾರದ ಆರ್ಥಿಕತೆಯ ಬೆಳವಣಿಗೆ ದರ 11.7% ಹಾಗೂ ಕೃಷಿ ಬೆಳವಣಿಗೆ ದರ 4.7% ಇದ್ದರೆ, ಭಾರತದ ಆರ್ಥಿಕತೆಯ ಬೆಳವಣಿಗೆ ದರ 8.3% ಮತ್ತು ಕೃಷಿ ಬೆಳವಣಿಗೆ ದರ 3.6% ರಷ್ಟಿತ್ತು. ಬಿಹಾರದಲ್ಲಿ ಎಪಿಎಂಸಿಗಳನ್ನು ತೆಗೆದ ಮೇಲೆ ರೈತರಿಗೆ ಸ್ಪರ್ಧಾತ್ಮಕ ಬೆಲೆಗಳು ಸಿಗಲಾಗಿ ಕೃಷಿ ಅಭಿವೃದ್ಧಿ ದರ ಹೆಚ್ಚಾಗಿದೆ.

## 9 ಒಪ್ಪಂದ ಕೃಷಿ: ಹೇರಿಕೆ ಅಲ್ಲ

ಒಪ್ಪಂದ ಕೃಷಿಯು ಸಂಪೂರ್ಣ ಸ್ವಯಂಪ್ರೇರಿತ. ಯಾವ ಬಲವಂತವೂ ಇಲ್ಲದ ಈ ಒಪ್ಪಂದ ಕೃಷಿಯಲ್ಲಿ ರೈತರು ಭಾಗವಹಿಸಬಹುದು ಅಥವಾ ಇಲ್ಲದಿರಬಹುದು. ಒಪ್ಪಂದ ಕೃಷಿಯಲ್ಲಿ ರೈತರಿಗೆ ಪೂರ್ವ ನಿರ್ಧಾರಿತ ಬೆಲೆಗೆ ಪೂರ್ವ ನಿರ್ಧಾರಿತ ಗುಣಮಟ್ಟದ ಬೆಳೆಯನ್ನು ಬೆಳೆದುಕೊಡಲು ಅವಕಾಶ ವಿರುತ್ತದೆ. ಒಪ್ಪಂದದ ಕೃಷಿ ಬೆಲೆಗಿಂತ ಮಾರುಕಟ್ಟೆ ಬೆಲೆ ಹೆಚ್ಚಿದ್ದರೆ, ಮಾರುಕಟ್ಟೆ ಬೆಲೆಯಲ್ಲೇ ಮಾರಬಹುದಾದ ಅನುಕೂಲವೂ ಇದೆ. ರೈತರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸ್ವಾತಂತ್ರ್ಯವಿದೆ. ಒಪ್ಪಂದ ಕೃಷಿಯಲ್ಲಿ ಸಣ್ಣ ರೈತರು ದೊಡ್ಡ ರೈತರಿಗಿಂತ ಹೆಚ್ಚಿನ ಲಾಭವನ್ನು ಪಡೆದಿರುವ ಅನುಭವವಿದೆ.

## 10 ಕೃಷಿ ಮಾರುಕಟ್ಟೆ ಸಮಸ್ಯೆ

ನಮ್ಮ ಕೃಷಿ ಮಾರುಕಟ್ಟೆಗಳಲ್ಲಿ ರೈತರಿಗೆ ಬೇಕಾದ ಸಂಗ್ರಹಣೆ, ಉಗ್ರಾಣ, ಸಂಸ್ಕರಣಾ ಘಟಕಗಳು, ಒಳ್ಳೆಯ ರಸ್ತೆಗಳು, ಸಣ್ಣ ರೈತರ ಜಮೀನಿನಿಂದ ಮಾರುಕಟ್ಟೆಗೆ ತರಲು ತಕ್ಕ ವಾಹನಗಳು ಇವುಗಳಿಗೆ ಬೇಕಾದ ಹೂಡಿಕೆ ಬಂಡವಾಳ, ಮಾರುಕಟ್ಟೆ ಸ್ಪರ್ಧೆ ಮತ್ತು ಮಾರುಕಟ್ಟೆಯನ್ನು ಸ್ಪರ್ಧಾತ್ಮಕವಾಗಿ ಮಾಡುವ ಬದ್ಧತೆ ಬೇಕಾಗಿದೆ. ಈ 3 ಕಾಯ್ದೆಗಳಿಂದ ಇದು ಸಾಧ್ಯವಾಗಲಿದೆ. ಇದುವರೆಗೂ ಕೃಷಿಯಲ್ಲಿ ಖಾಸಗಿ ಬಂಡವಾಳವೇ ಶೇ.75ರಷ್ಟು ಆಗಿದ್ದು, ಅವೆಲ್ಲವೂ ರೈತರಿಂದಲೇ ಆಗಿದೆ. ಆದ್ದರಿಂದ ಇನ್ನು ಮುಂದೆ ಮಾರುಕಟ್ಟೆಗಳಲ್ಲಿ ನಾನಾ ರೀತಿಯ ಮೂಲಸೌಕರ್ಯಗಳು, ಸಂಸ್ಕರಣಾ ಘಟಕಗಳು, ಲಾಜಿಸ್ಟಿಕ್ಸ್‌ಗಳಲ್ಲಿ ಹೂಡಿಕೆಗಳು ಸಮಾಜಕ್ಕೆ ಪ್ರಯೋಜನವನ್ನು ನೀಡುತ್ತದೆ.